ಕರ್ನಾಟಕ ಸರ್ಕಾರ

ಸಂಖ್ಯೆ: ಪಮೂಶಿ/ಶೈಶಾ/ಪ.ಪು/ಪ.ಗ್ರ/01/2016-17

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು-560012
ದಿನಾಂಕ: 28.01.2017

## ಜ್ಞಾಪನಾ

**ವಿಷಯ:** 14 ಪ್ರಮುಖ ವಿಷಯಗಳಿಗೆ ಸಂಬಂಧಿಸಿದ ಪರಾಮರ್ಶನ ಗ್ರಂಥಗಳ ಪಟ್ಟಿಯೊಂದಿಗೆ ಸಭೆಗೆ ಹಾಜರಾಗುವ ಕುರಿತು

**ಉಲ್ಲೇಖ:** ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಮಾನ್ಯ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ಕಡತ ಸಂಖ್ಯೆ: ಪಮೂಶಿ/ಶೈಶಾ-04/ಪ.ಗ್ರ/2016-17 ದಿನಾಂಕ:23-01-2017 ರಲ್ಲಿ ನೀಡಿರುವ ಆದೇಶ

14 ಪ್ರಮುಖ ವಿಷಯಗಳಿಗೆ (ಕನ್ನಡ, ಇಂಗ್ಲೀಷ್, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಭೂಗೋಳಶಾಸ್ತ್ರ, ವಾಣಿಜ್ಯಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಜೀವಶಾಸ್ತ್ರ, ಗಣಕವಿಜ್ಞಾನ. ಮತ್ತು ಇಲೆಕ್ಟ್ರಾನಿಕ್ಸ್ ) ಸಂಬಂಧಿಸಿದಂತೆ ಪರಾಮರ್ಶನ ಗ್ರಂಥಗಳ (Reference Book) ಪಟ್ಟಿಯನ್ನು ನೀಡಲು ಈಗಾಗಲೇ ಸೂಚಿಸಲಾಗಿತ್ತು ಆದರ ಇದುವರೆವಿಗೂ ಕೆಲವು ವಿಷಯಗಳ ಪಟ್ಟಿಗಳು ಸ್ವೀಕೃತವಾಗಿರುವುದಿಲ್ಲ ಹಾಗೂ ಸ್ವೀಕೃತಗೊಂಡಿರುವ ಪಟ್ಟಿಗಳಲ್ಲಿ ಸ್ಪಷ್ಟತೆ ಇರುವುದಿಲ್ಲ.

ಪ್ರಯುಕ್ತ, ನಿರ್ದೇಶಕರ ಕಛೇರಿ. ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು ಈ ಕಛೇರಿಯ ಸಭಾಂಗಣದಲ್ಲಿ ದಿನಾಂಕ 01.02.2017 ರಂದು ಬೆಳಿಗ್ಗೆ 10.30 ಗಂಟೆಗೆ ನಡೆಯುವ ಸಭೆಗೆ 14 ವಿಷಯಗಳ Academic Councilನ ಅಧ್ಯಕ್ಷರುಗಳು ಅನುಬಂಧದಲ್ಲಿರುವ ವಿವರ ಹಾಗೂ ಸೂಚನೆಗಳಂತೆ ವಿಷಯವಾರು ಪಟ್ಟಿಯೊಂದಿಗೆ ಕಡ್ಡಾಯವಾಗಿ ಹಾಜರಾಗುವುದು. ಸಭೆಯಲ್ಲಿ ಭಾಗವಹಿಸುವವರು ಕೆ.ಸಿ.ಎಸ್.ಆರ್ ನಿಯಮಗಳನ್ವಯ ದಿನಭತ್ಯೆ ಹಾಗೂ ಪ್ರಯಾಣ ಭತ್ಯೆಗೆ ಅರ್ಹರಿರುತ್ತಾರೆ.

(ಮಾನ್ಯ ನಿರ್ದೇಶಕರ ಆದೇಶದ ಮೇರೆಗೆ)

ಜಂಟಿ ನಿರ್ದೇಶಕರು(ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಗೆ,

14 ವಿಷಯಗಳ Academic Council ನ ಅಧ್ಯಕ್ಷರಿಗೆ- ಮುಂದಿನ ಅಗತ್ಯ ಕ್ರಮಕ್ಕಾಗಿ

**ಪ್ರತಿಯನ್ನು,**

1. ಮಾನ್ಯ ನಿರ್ದೇಶಕರ ಆಪ್ತ ಶಾಖೆಗೆ – ಅವಗಾಹನೆಗಾಗಿ ಸಲ್ಲಿಸಿದೆ.
2. ಇ- ಗವರ್ನೆನ್ಸ್ ಶಾಖೆಗೆ - ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲು
3. ಕಛೇರಿ ಪ್ರತಿ

# ಅನುಬಂಧ

Subject: Class: I PUC /II PUC

| Preference (ಆದ್ಯತೆ) | Title of the Book (ಪುಸ್ತಕದ ಶೀರ್ಷಿಕೆ) | Author's Name (ಲೇಖಕರ ಹೆಸರು) | Publishers Name and Address (ಪ್ರಕಾಶಕರ ಹೆಸರು) | Year of Publishing (ಪ್ರಕಟಣೆಯ ವರ್ಷ) | Price of the book (Rs) (ಪುಸ್ತಕದ ಮುಖಬೆಲೆ ರೂಗಳಲ್ಲಿ) |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |

ಸಹಿ/-
ಅಧ್ಯಕ್ಷರು/ ಅಧ್ಯಕ್ಷರ ಪರವಾಗಿ
ವಿಳಾಸ ಮತ್ತು ದೂರವಾಣಿಯೊಂದಿಗೆ

## ಸೂಚನೆಗಳು

1) PCMB, Electronics, Computer Science ವಿಷಯಗಳಿಗೆ ಸಂಬಂಧಿಸಿದಂತೆ ಪ್ರತಿ ವಿಷಯಕ್ಕೆ ಗರಿಷ್ಠ ಮೊತ್ತ ರೂ 10,000=00 ಗಳು ಹಾಗೂ ಇತರೆ ವಿಷಯಗಳಿಗೆ ರೂ 9,000=00 ಗಳ ಒಳಗಿರಬೇಕು.
2) ಪ್ರಥಮ ಮತ್ತು ದ್ವಿತೀಯ ಪಿಯುಸಿ ಎರಡೂ ತರಗತಿಗಳಿಗೆ ಸಂಬಂಧಿಸಿದಂತೆ ಪರಾಮರ್ಶನ ಗ್ರಂಥಗಳಿರಬೇಕು.
3) ಸೂಚಿಸಲ್ಪಡುವ ಪರಾಮರ್ಶನ ಗ್ರಂಥಗಳನ್ನು ಆದ್ಯತೆಯ ಮೇರೆಗೆ ನಮೂದಿಸಬೇಕು. ಅಂದರೆ ಮೇಲಿನ ಕ್ರಮ ಸಂಖ್ಯೆಯಲ್ಲಿ ನಮೂದಿಸುವ ಪರಾಮರ್ಶನ ಗ್ರಂಥಗಳು ಪ್ರಥಮ ಆದ್ಯತೆ ಹಾಗೂ ನಂತರದ ಕ್ರಮಸಂಖ್ಯೆಯಲ್ಲಿ ನಮೂದಿಸುವ ಪರಾಮರ್ಶನ ಗ್ರಂಥಗಳು ನಂತರದ ಆದ್ಯತೆಯೆಂದು ಪರಿಗಣಿಸಿ, ಪಟ್ಟಿಯನ್ನು ತಯಾರಿಸುವುದು.
4) ಸೂಚಿಸಲ್ಪಡುವ ಗ್ರಂಥಗಳು ಸರ್ಕಾರದಿಂದ ರಚಿಸಲ್ಪಟ್ಟಿರುವ ತ್ರಿಸದಸ್ಯ ಸಮಿತಿಯ ಮುಂದೆ ಮಂಡಿಸಲ್ಪಟ್ಟು, ಪರಿಶೀಲನೆಗೆ ಒಳಪಡುವುದರಿಂದ ಅತ್ಯುತ್ತಮ ಗುಣಮಟ್ಟದ ಪುಸ್ತಕಗಳನ್ನು ಮಾತ್ರ ಪಟ್ಟಿಯಲ್ಲಿ ಸೇರಿಸುವುದು.
5) ಪಟ್ಟಿಯ ಕೆಳಗೆ ಕಡ್ಡಾಯವಾಗಿ ಸಹಿ ಮಾಡಿ, ಹೆಸರು, ವಿಳಾಸ ದೂರವಾಣಿ ಸಂಖ್ಯೆಯನ್ನು ಇ-ಮೇಲ್ ವಿಳಾಸದೊಂದಿಗೆ ಸ್ಪಷ್ಟವಾಗಿ ನಮೂದಿಸುವುದು.
6) ಅನಿವಾರ್ಯ ಕಾರಣಗಳಿಂದ ಅಧ್ಯಕ್ಷರು ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದಲ್ಲಿ ಅವರ ಪರವಾಗಿ ಸಮಿತಿಯ ಇತರೆ ಓರ್ವ ಸದಸ್ಯರನ್ನು ನಿಯೋಜಿಸುವುದು.
7) ಸಂಬಂಧಿಸಿದ ಅಧ್ಯಕ್ಷರು ಸಮಿತಿಯ ಇತರೆ ಸದಸ್ಯರೊಂದಿಗೆ ದೂರವಾಣಿಯೊಂದಿಗೆ ಚರ್ಚಿಸಿ, ಗ್ರಂಥಗಳ ಪಟ್ಟಿಯನ್ನು ಅಂತಿಮಗೊಳಿಸಲು ಸೂಚಿಸಿದೆ.